**ದಿಃ 23-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ**

(ಪ್ರತಿವಾದಿ ನಂ 1 ರಿಂದ 13 ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ನಂ 14 ರ ಪರ ಶ್ರೀ ಎನ್ ಎಚ್ ಪಿ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ಕೇವಲ ಸಹಿ ಮಾಡಲು ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಾಗುವುದಿಲ್ಲ. ಉಳಿದ ವಾದಿಯರು ನನ್ನ ಅಕ್ಕ ತಂಗಿಯರು. ದಾವೆ ಸಲ್ಲಿಸುವ ಸಮಯದಲ್ಲಿ ಮೃತ ಪಾರವ್ವ ಇವರಿಗೆ ಎಷ್ಟು ವಯಸ್ಸಾಗಿತ್ತು ಹೇಳಲು ಬರುವುದಿಲ್ಲ. ಅನಸವ್ವ ನನ್ನ ತಂಗಿ ಸದರಿಯವರು ಮೃತಪಟ್ಟಿದ್ದಾರೆ. ಪಾರವ್ವನನ್ನು ಮದುವೆ ಮಾಡಿ ಕಿತ್ತೂರ ತಾಲೂಕಿನ ಸಂಗೊಳಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿತ್ತು. ಆದರೆ ಸದರಿಯವರು ತವರು ಮನಗೆ ಬಂದು ಉಳಿದಿದ್ದರು. ನಾನು ಹಾಗೂ ಪಾರವ್ವ ಅಣ್ಣ ತಮ್ಮನನ್ನು ಮದುವೆ ಆಗಿದ್ದು ನಾನು ಹಾಗೂ ಪಾರವ್ವ ತವರು ಮನೆಯಲ್ಲಿ ಬಂದು ಉಳಿದುಕೊಂಡಿದ್ದೇವೆ. ಎಷ್ಟು ವರ್ಷಗಳ ಹಿಂದೆ ಎಂದು ಹೇಳಲು ಬರುವುದಿಲ್ಲ. ಪಾರವ್ವ ಗಂಡ ಮಕ್ಕಳೊಂದಿಗೆ ತವರು ಮನೆಯಲ್ಲಿ ಉಳಿದುಕೊಂಡಿದ್ದಳು. ಅನಸವ್ವನನ್ನು ಎಮ್ಮೆಟ್ಟಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿತ್ತು. ಅನಸವ್ವ ಗಂಡನ ಮನೆಯಲ್ಲಿ ವಾಸವಾಗಿದ್ದಳು ಅಲ್ಲಿಯೇ ಮೃತಪಟ್ಟಿದ್ದಾಳೆ. 4 ನೇ ವಾದಿಯನ್ನು ಅಳ್ನಾವರಕ್ಕೆ ಮದುವೆ ಮಾಡಿಕೊಟ್ಟಿದ್ದು ಅಲ್ಲಿಯೇ ವಾಸವಾಗಿದ್ದಾಳೆ. ಪಾರವ್ವನ ಮದುವೆ ಎಷ್ಟು ವರ್ಷಗಳ ಹಿಂದೆ ಆಗಿತ್ತು ಹೇಳಲು ಬರುವುದಿಲ್ಲ. ಅನಸವ್ವ ಹಾಗೂ ಗಿರಿಜವ್ವ ಇವರ ಮದುವೆ ಆದ ವರ್ಷಗಳು ಹೇಳಲು ಬರುವುದಿಲ್ಲ.

ಆಸ್ತಿಯಲ್ಲಿ ಪಾಲು ಕೇಳಿ ದಾವೆ ಸಲ್ಲಿಸಿದ್ದೇವೆ. ದಾವೆಯನ್ನು ಅಣ್ಣತಮ್ಮಂದಿರ ವಿರುದ್ಧ ಸಲ್ಲಿಸಿದ್ದೇವೆ. ದಾವಾ ಆಸ್ತಿಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ. ಆದರೆ ಒಟ್ಟು 5 ಆಸ್ತಿಗಳು ಇರುತ್ತವೆ. 12 ಎಕರೆ, 9 ಎಕರೆ, 2 ಎಕರೆ, 3 ಎಕರೆ ವಿಸ್ತೀರ್ಣ ಇರುತ್ತವೆ. ಒಟ್ಟು 35 ಎಕರೆ ಜಮೀನು ಇರುತ್ತದೆ. ಎಲ್ಲರೂ ಸೇರಿಕೊಂಡು ದಾಖಲೆಗಳನ್ನು ತೆಗೆಸಿದ್ದೇವೆ. ದಾವೆಗೆ ನಾವೆ ಮಾಹಿತಿ ಕೊಟ್ಟಿದ್ದೇವೆ. ನಾನು ಹಟಕಿನಾಳ ಗ್ರಾಮಕ್ಕೆ ಸುಮಾರು 20 ವರ್ಷಗಳ ಹಿಂದೆ ಬಂದು ಅಲ್ಲಿಯೇ ವಾಸವಾಗಿದ್ದೇನೆ. 2000 ನೇ ಇಸ್ವಿಯಲ್ಲಿ ಬಂದಿರಬಹುದು ಆದರೆ ನೆನಪಿಲ್ಲ. ಸರ್ವೆ ನಂ 60/2 ರ ಕ್ಷೇತ್ರ 3 ಎಕರೆ, 61 ರ ಕ್ಷೇತ್ರ 4 ಎಕರೆ 21 ಗುಂಟೆ ಎನ್ನುವದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ನಮ್ಮ ಅಜ್ಜನಿಂದ ಬಂದ ಆಸ್ತಿಗಳು. ನಮ್ಮ ಅಜ್ಜನ ಹೆಸರು ಗೊತ್ತಿಲ್ಲ. ಸದರಿ ಆಸ್ತಿಗಳು ನಮ್ಮ ಅಜ್ಜನಿಂದ ಬಂದ ಆಸ್ತಿಗಳು ಎಂದು ತೋರಿಸಲು

ದಾಖಲೆ ಹಾಜರ ಪಡಿಸಿದ್ದೇವೆ. ಕಾಗದ ಪತ್ರಗಳನ್ನು ಹಾಜರ ಪಡಿಸಿದ್ದು ಯಾವ ದಾಖಲೆ ಎಂದು ಹೇಳಲು ಬರುವುದಿಲ್ಲ. ಸದರಿ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಅಲ್ಲ ಅಂದರೆ ಸರಿಯಲ್ಲ.

ಸರ್ವೆ ನಂ 60/2 ಹಾಗೂ 61 ರ ಜಮೀನುಗಳು ಮೂಲತಃ ಕಡೆಕೊಪ್ಪ ಗ್ರಾಮದ ಜಮೀನುಗಳು ಅಂದರೆ ಸರಿಯಲ್ಲ. ಸರ್ವೆ ನಂ 60/2 ರ ಮೂಲ ಸರ್ವೆ ನಂ 4 ಎಂದಾಗಿತ್ತು ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂ 61 ರ ಮೂಲ ಸರ್ವೆ ನಂ 5 ಎಂದಾಗಿತ್ತು ಎನ್ನುವದು ನನಗೆ ಗೊತ್ತಿಲ್ಲ. ಮೂಲ ಸರ್ವೆ ನಂ 4 ರ ಜಮೀನು ಕೃಷ್ಣಾಜಿ ನಾರಾಯಣರಾವ್ ದೇಸಾಯಿ ಇವರಿಗೆ ಸೇರಿತ್ತು ಎನ್ನುವದು ನನಗೆ ಗೊತ್ತಿಲ್ಲ. ಮೂಲ ಸರ್ವೆ ನಂ 5 ರ ಜಮೀನು ವೆಂಕಟರಾವ್ ಗಂಗಾರಾಮ ದೇಸಾಯಿ ಇವರ ವಾರಸುದಾರರಾದ ಭೀಮಸೇನ, ಅಶೋಕ, ಸುಬ್ರಾಯ, ಗುಂಡಪ್ಪ ಇವರಿಗೆ ಸೇರಿತ್ತು ಎನ್ನುವದು ನನಗೆ ಗೊತ್ತಿಲ್ಲ. ಮೂಲ ಸರ್ವೆ ನಂ 5 ರಜಮೀನು ಭೀಮಸೇನ, ಅಶೋಕ, ಸುಬ್ರಾಯ, ಗುಂಡಪ್ಪ ಇವರು ನಮ್ಮ ತಂದೆ ಸಂಗಯ್ಯ ದಿನಾಂಕ 11.12.1961 ರಲ್ಲಿ ಮಾರಾಟ ಮಾಡಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನಮ್ಮ ತಂದೆ ಖರೀದಿಸಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂ 60 ರ ಜಮೀನನ್ನು ನಮ್ಮ ತಂದೆ ಸಂಗಯ್ಯ ಖರೀದಿಸಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಮೂಲ ಸರ್ವೆ ನಂ 4 ಮತ್ತು 5 ರ ಜಮೀನು ಕಡೆಕೊಪ್ಪ ಗ್ರಾಮಡಕ್ಕೆ ಸೇರಿದ್ದು ನಂತರ ಹಟಕಿನಾಳ ಗ್ರಾಮಕ್ಕೆ ಸೇರಿದ್ದು ಆಗ ಅವುಗಳ ಸರ್ವೆ ನಂ 60 ಹಾಗೂ 61 ಎಂದು ಆಗಿರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ನಮ್ಮ ತಂದೆ ಸದರಿ ಜಮೀನುಗಳನ್ನು ಖರೀದಿಸಿರುವುದರಿಂದ ಅವು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ.

ನಮ್ಮ ತಂದೆ ಕುಟುಂಬಕ್ಕೆ ಸಾಕಷ್ಟು ಆದಾಯ ಇತ್ತು ಹಾಗೂ ಯಾವುದೆ ಸಾಲ ಇರಲಿಲ್ಲ ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿಲ್ಲ. ನಮ್ಮ ತಂದೆ ತನ್ನ ಜೀವಿತ ಕಾಲದಲ್ಲಿ ಸರ್ವೆ ನಂ 61 ರ ಜಮೀನನ್ನು ಗಂಡುಮಕ್ಕಳಿಗೆ ಕೊಟ್ಟಿದ್ದಾರೆ ಎಂದರೆ ನಿಜ. ದಾವೆ ಸಲ್ಲಿಸುವ ಮುಂಚೆ ಈ ವಿಷಯ ನನಗೆ ಗೊತ್ತಿತ್ತು. ನಮ್ಮ ತಂದೆ ಜಮೀನನ್ನು ಗಂಡುಮಕ್ಕಳಿಗೆ ಕೊಟ್ಟಿರುವುದು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ. ನಮ್ಮ ತಂದೆ ಗಂಡುಮಕ್ಕಳಿಗೆ ಆಸ್ತಿ ಬಿಟ್ಟುಕೊಟ್ಟಿರುವುದನ್ನು ಪ್ರಶ್ನಿಸಿ ನಾವು ಯಾವುದೆ ಮೇಲ್ಮನವಿ ಸಲ್ಲಿಸಿಲ್ಲ.

ಸರ್ವೆ ನಂ 60 ರ ಜಮೀನಿನಲ್ಲಿ ನಮ್ಮ ತಂದೆ ಹಾಗೂ ನಮ್ಮ ಸಹೋದರರು 1980 ರಲ್ಲಿ ಪಾಲು ಮಾಡಿಕೊಂಡಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ವಾಟ್ನಿ ಪ್ರಕಾರ ಸರ್ವೆ ನಂ 60 ರಲ್ಲಿ ಹಿಸ್ಸೆಗಳಾಗಿದ್ದು ಹೆಸರುಗಳು ದಾಖಲಾಗಿರುತ್ತವೆ ಎನ್ನುವದು ನನಗೆ ಗೊತ್ತಿಲ್ಲ. ನಮ್ಮ ಅಣ್ಣತಮ್ಮಂದಿರ ಹೆಸರುಗಳು ಪಹಣಿ ಪತ್ರಿಕೆಗಳಲ್ಲಿ ಯಾವ ರೀತಿ ದಾಖಲಾದವು ಎನ್ನುವದರ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ.

ನನಗೆ ದೇವೆಂದ್ರಪ್ಪ ಅನಂತಪ್ಪ ಪಟ್ಟಣಶೆಟ್ಟಿ ಎನ್ನುವವರು ಕಲಘಟಗಿಯವರು ಎನ್ನುವದು ನನಗೆ ಗೊತ್ತಿದೆ. ವಸಂತರಾವ ಪಟ್ಟಣಶೆಟ್ಟಿ ಇವರ ಹೆಸರನ್ನು ಕೇಳಿದ್ದೇನೆ. ವಸಂತರಾವ್ ಹಾಗೂ ದೇವೆಂದ್ರಪ್ಪ ಅಣ್ಣ ತಮ್ಮಂದಿರು ಎನ್ನುವದು ನನಗೆ ಗೊತ್ತಿಲ್ಲ.

ದಿನಾಂಕ 21.04.1984 ರಂದು ನಮ್ಮ ತಾಯಿ ಹಾಗೂ ನಮ್ಮ ಸಹೋದರರು ಸರ್ವೆ ನಂ 60/1 ರ ಜಮೀನನ್ನು ದೇವೆಂದ್ರಪ್ಪ ಪಟ್ಟಣಶೆಟ್ಟಿ ಎನ್ನುವವರೆಗೆ ಮಾರಾಟ ಮಾಡಿದ್ದಾರೆ ಆದರೆ ನಾವು ಅದಕ್ಕೆ ಸಹಿ ಮಾಡಿಲ್ಲ. ದಿನಾಂಕ 29.08.1985 ರಂದು ಸರ್ವೆ ನಂ 61 ನ್ನು ವಸಂತರಾವ್ ಪಟ್ಟಣಶೆಟ್ಟಿ ಎನ್ನುವವರೆಗೆ ಮಾರಾಟ ಮಾಡಿದ್ದಾರೆ ಆದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ನಮ್ಮ ಅಣ್ಣ ತಮ್ಮಂದಿರು ಸಿಂಡಿಕೇಟ್ ಬ್ಯಾಂಕ ಹಾಗೂ ಸೊಸೈಟಿಯಲ್ಲಿ ಸಾಲ ಮಾಡಿಕೊಂಡಿದ್ದರು ಎನ್ನುವದು ನನಗೆ ಗೊತ್ತಿಲ್ಲ. 1950 ರಿಂದ 2000 ವರೆಗಿನ ದಾಖಲೆಗಳನ್ನು ತೆಗೆಸಿ ನೋಡಿದ್ದಿರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನಾನು ಬ್ಯಾಂಕಿನಿಂದ ಸಾಲ ಪಡೆದುಕೊಳ್ಳುವ ವ್ಯವಹಾರ ಮಾಡುವುದಿಲ್ಲ. ಸಾಲ ಪಡೆದುಕೊಂಡಾಗ ಉತಾರದಲಿಲ ಭೋಜಾ ಕಾಣಿಸುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂ 60/1 ಹಾಗೂ 61 ರ ಜಮೀನಿನ ಮೇಲೆ ಸಾಲ ಪಡೆದುಕೊಂಡ ಬಗ್ಗೆ ಭೋಜಾ ದಾಖಲಾಗಿರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ನಮ್ಮ ಅಣ್ಣ ತಮ್ಮಂದಿರು ಸಾಲ ತೀರಿಸುವ ಸಲುವಾಗಿ ಸರ್ವೆ ನಂ 60 ಮತ್ತು 61 ರ ಜಮೀನುಗಳನ್ನು ಮಾರಾಟಕ್ಕೆ ಇಟ್ಟಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಸಾಲ ತೀರಿಸುವ ಸಲುವಾಗಿ ಜಮೀನು ಮಾರಾಟ ಮಾಡುತ್ತಿರುವ ಬಗ್ಗೆ ಕ್ರಯ ಪತ್ರಗಳಲ್ಲಿ ನಮೂದ ಇರುತ್ತದೆ ಎನ್ನುವದು ನನಗೆ ಗೊತ್ತಿಲಲ. ಖರೀದಿ ಮಾಡಿಕೊಳ್ಳುವ ಮುಂಚೆ ದೇವೆಂದ್ರಪ್ಪ ಹಾಗೂ 14 ನೇ ಪ್ರತಿವಾದಿ ಜೊತೆಗೆ ಮಾತು ಕತೆ ಮಾಡಿ ನಂತರ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ಕ್ರಯ ಪತ್ರದ ಪ್ರಕಾರ ಸರ್ವೆ ನಂ 61 ರ ಜಮೀನು ವಸಂತರಾವ್ ಪಟ್ಟಣಶೆಟ್ಟಿರವರ ಹೆಸರು ದಾಖಲಾಗಿರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ಜಮೀನು ಖರೀದಿಸಿದಾಗಿನಿಂದ ಖರೀದಿದಾರರು ಸ್ವಾಧೀನ ಹೊಂದಿರುತ್ತಾರೆ ಅಂದರೆ ಸರಿಯಲ್ಲ, ನಾವು ಸಾಗುವಳಿ ಮಾಡುತ್ತಿದ್ದೇವೆ. ಜಮೀನು ಸಾಗುವಳಿ ಮಾಡುತ್ತಿರುವ ಬಗ್ಗೆ ದಾಖಲೆ ಹಾಜರ ಪಡಿಸಿದ್ದೇವೆ ಆದರೆ ನನಗೆ ಗೊತ್ತಾಗುವುದಿಲ್ಲ. ನಾವು ಮೊದಲು ಭತ್ತ ಕಬ್ಬು ಬೆಳೆಯುತ್ತಿದ್ದೆವು. ಈಗ ಭತ್ತ ಬೆಳೆಯುತ್ತಿದ್ದೇವೆ. ಈಗ ಜಮೀನಿನಲ್ಲಿ ಭತ್ತ ಹಾಗೂ ಕಬ್ಬು ಇರುತ್ತದೆ. ಅವುಗಳ ಇಳುವರಿ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಭತ್ತ ಹಾಗೂ ಕಬ್ಬು ಬೆಳೆ ಮಾರಾಟ ಮಾಡಿದ ಬಗ್ಗೆ ದಾಖಲೆಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಕಬ್ಬು ಮಾರಾಟ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ 60 ಮತ್ತು 61 ರ ಜಮೀನುಗಳ ಮೇಲೆ ನಮಗೆ ಯಾವುದೆ ರೀತಿಯ ಹಕ್ಕು ಹಿತಾಸಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ.

ಜಮೀನುಗಳನ್ನು ಮಾರಾಟ ಮಾಡಿದ ನಂತರ ನಾವು ಕಂದಾಯ ಅಧಿಕಾರಿಗಳಿಗೆ ಹಾಗೂ ಪೋಲೀಸರಿಗೆ ದೂರು ನೀಡಿರುವುದು ಗೊತ್ತಾಗುವುದಿಲ್ಲ. ಸರ್ವೆ ನಂ 60 ಮತ್ತು 61 ರ ಜಮೀನಿನ್ಲಿ ನಾವು ಹಾಗೂ ನಮ್ಮ ಸಹೋದರರು ಜಂಟಿ ಸ್ವಾಧೀನ ಹೊಂದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಜಮೀನು ಖರೀದಿ ಮಾಡಿದಾಗಿನಿಂದ ಪ್ರತಿವಾದಿ ನಂ 14 ರವರ ತಂದೆ ಹಾಗೂ ಅವರ ಕಾಕ ದೇವೆಂದ್ರಪ್ಪ ಸ್ವಾಧೀನ ಹೊಂದಿದ್ದು ಅವರೆ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. ಸದರಿ ಜಮೀನುಗಳಿಗೆ ನೀರಾವರಿ ಸೌಕರ್ಯ

ಇರುವುದಿಲ್ಲ. ಪ್ರತಿವಾದಿ ನಂ 14 ರವರು ಸದರಿ ಜಮೀನುಗಳಲ್ಲಿ ಬೋರವೆಲ್ ಹಾಕಿ ನೀರಿನ ಸೌಲಭ್ಯ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು ನಮ್ಮ ಸಹೋದರರು ಈಗಾಗಲೇ ಮಾರಾಟ ಮಾಡಿದ್ದಾರೆ ಎನ್ನುವ ವಿಷಯ ನಮಗೆ ಗೊತ್ತಿತ್ತು ಆದ್ದರಿಂದ ಇಲ್ಲಿಯವರೆಗೆ ಸುಮ್ಮನಿದ್ದೇವು ಅಂದರೆ ಸರಿಯಲ್ಲ. ಈಗ ಜಮೀನುಗಳ ಮೌಲ್ಯ ಹೆಚ್ಚಾಗಿರುವುದರಿಂದ ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ನಮಗೆ ಯಾವುದೆ ರೀತಿಯ ಹಕ್ಕು ಹಿತಾಸಕ್ತಿ ಹಾಗೂ ಪಾಲು ಇರುವುದಿಲ್ಲ ಅಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>**

(ಪ್ರತಿವಾದಿ ನಂ 15 (ಎ) ದಿಂದ (ಡಿ) ಪರ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಸದರಿಯವರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.